ಪುಟ ಬಂಗಾರ

# ಬೇಂದ್ರೆಯವರ ಬಗ್ಗೆ ಮಾತಾಡಲು ಸಿದ್ಧತೆ



**ಪಿ. ಲಂಕೇಶ್**

ಎಲ್ಲ ಕಷ್ಟಗಳು ಒಂದೇ ಸಲಕ್ಕೆ ಬಂದಂತೆ ಅನ್ನಿಸಿತ್ತು. ನನ್ನ ಜೀವನಚರಿತ್ರೆ ಮುಂದುವರಿದಿರಲಿಲ್ಲ. ಎಂದೋ ಹುಮ್ಮಸ್ಸಿನ ಗಳಿಗೆಗಳಲ್ಲಿ ಎಪ್ಪತ್ತು ಪುಟ ಬರೆದಿದ್ದೆ. ಓದಿ ನೋಡಿದರೆ ಚೆನ್ನಾಗಿತ್ತು. ಆದರೆ ಅಲ್ಲಲ್ಲಿ ಸಡಿಲ ಅಂಶಗಳು ಇದ್ದವು. ಇನ್ನೊಮ್ಮೆ ಸರಿಯಾಗಿ ನೆನಪು ಮಾಡಿಕೊಂಡು ತಿದ್ದಿ ಬರೆದರೆ ಚೆನ್ನಾಗಿರುತ್ತೆ ಅನಿಸಿತ್ತು. ಕಣ್ಣಿನ ನೋವು ಹೆಚ್ಚಾಗುತ್ತಿದ್ದಂತೆ, ಕಣ್ಣಿನ ರಕ್ತಸ್ರಾವ ಭಯ ಹುಟ್ಟಿಸುತ್ತಿದ್ದಂತೆ ಈ ಕಡೆ ಗಮನ ಕೊಡಲಾಗದೆ ಮಾಧ್ಯಮಿಕ ಶಾಲೆಯ ಹಂತಕ್ಕೇ ನಿಲ್ಲಿಸಿದ್ದೆ. ನನ್ನ 60ನೇ ಹುಟ್ಟುಹಬ್ಬದ ಸಮಯದಲ್ಲಿ ಆ ಪುಸ್ತಕ ಹೊರಬಂದರೆ ಚೆನ್ನಾಗಿರುತ್ತೆ ಎಂದು ಮಿತ್ರರು ಹೇಳತೊಡಗಿದ್ದರು. ಆದರೆ ಅವರಿಗೂ ಗೊತ್ತಿತ್ತು. ಈಗ ನಾನು ಬರೆಯುವುದು ಕಷ್ಟ. ಈ ದಿನ, ಇನ್ನೊಂದು ದಿನ ಎಂದು ಬದುಕುತ್ತಾ ಹೋಗುವುದೇ ಕೆಲಸವಾಗಿರುವಾಗ ಬೇಂದ್ರೆ ಸೆಮಿನಾರ್ ಬಂದಿತ್ತು. ಬೇಂದ್ರೆ ಈಗ ಇದ್ದಿದ್ದರೆ ನೂರು ವರ್ಷದವರಾಗುತ್ತಿದ್ದರು. ಅವರ ಸಂಕಿರಣದಲ್ಲಿ ಭಾಗವಹಿಸುವುದಾಗಿ ಹೇಳಿದ್ದ ನಾನು ಬೇಂದ್ರೆಯವರನ್ನು ಭೇಟಿಯಾದದ್ದು ನೆನಪಿಸಿಕೊಂಡೆ. ಆಗ ಗೋಕಾಕ್ ನಮ್ಮ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದರು. ಬೇಂದ್ರೆ ಬಂದಾಗಲೆಲ್ಲ ಅವರ ಮನೆಯಲ್ಲಿರುತ್ತಿದ್ದರು. ನಾನು ಆಗ ಬರೆಯಬೇಕೆಂದು ಪ್ರಯತ್ನಿಸುತ್ತಿದ್ದವನು. ಅಷ್ಟರಲ್ಲಿ ನನ್ನ ಕವನ ಸಂಕಲನ, ಎರಡು ಕಥಾಸಂಕಲನಗಳು ಪ್ರಕಟವಾಗಿದ್ದವು. ನನ್ನ ಪ್ರಕ್ಷುಬ್ಧತೆಯ ಕಾಲ ಅದು. ಯಾರನ್ನೂ ವಿನಯದಿಂದ ಕಾಣುವುದಾಗಲಿ, ವಿಶೇಷ ಸನ್ನಡತೆಯಿಂದ ವರ್ತಿಸುವುದಾಗಲಿ ನನ್ನಿಂದಾಗದಿದ್ದ ಕಾಲ. ಬೇಂದ್ರೆಯವರಿಗೆ ಆಗಲೇ 70 ಅಥವಾ 74 ವರ್ಷವಾಗಿತ್ತು (ಇದು 1970ಕ್ಕೆ ಮುಂಚೆ). ಬೇಂದ್ರೆ ತುಂಬ ಮಾತಾಡುತ್ತಿದ್ದರು. ಅವರನ್ನು ಹೊಗಳಿ, ಅವರ ಪದ್ಯ ಚರ್ಚಿಸಿ ಮಾತಾಡಿದ್ದರೆ ಚೆನ್ನಾಗಿತ್ತು. ಆದರೆ ನಾವೆಲ್ಲ ಗೋಕಾಕ್ ಕವಿಯೇ ಅಲ್ಲ, ಬೇಂದ್ರೆ ಕೇವಲ ಗೇಯಗುಣದ ಕವಿ ಎಂದು ನಂಬಿದ್ದ ಕಾಲ. ಅಡಿಗರು ತಮ್ಮ ಅತ್ಯುತ್ತಮ ಪದ್ಯ ಬರೆಯುತ್ತಿದ್ದರು. ಬೇಂದ್ರೆ ಸ್ವಲ್ಪ ಇಳಿಮುಖವಾಗುತ್ತಿದ್ದಂತೆ ಅನ್ನಿಸುತ್ತಿತ್ತು.

ಈಗ ಬೇಂದ್ರೆಯವರ ಬಗ್ಗೆ ಮಾತಾಡಲು ಸಿದ್ಧತೆ ನಡೆಸುತ್ತಾ ನನಗೆ ಬಹು ಗಾಢವಾಗಿ ಕಾಡಿದ್ದು ಅವರ ಸ್ಥಳೀಯತೆ, ಸ್ವಂತಿಕೆ ಮತ್ತು ಸೂಕ್ಷ್ಮಜ್ಞತೆ. ಹಾಗೆಯೇ ಇವತ್ತು ನನ್ನನ್ನು ದಂಗು ಬಡಿಸಿರುವ ವಿಷಯ ಇಂದಿನ ಅಂತರರಾಷ್ಟ್ರೀಯತೆ. ನಾವು ಈಗ ಈ ಜಗತ್ತಿನಲ್ಲಿರುವ ನೂರಾರು ಸಾಂಸ್ಕೃತಿಕ ವಲಯಗಳನ್ನು ಗಮನಿಸಿದರೆ, ಸ್ಥಳೀಯ ನಂಬಿಕೆ ಮತ್ತು ಆಚರಣೆಗಳನ್ನು ಅಭ್ಯಸಿಸಿದರೆ, ಈ ಸಂಸ್ಕೃತಿಗಳು ಅಂತರರಾಷ್ಟ್ರೀಯ ಪ್ರಜ್ಞೆಯ ಜೊತೆಗೆ ಸಂಘರ್ಷಿಸುವುದು ಖಂಡಿತ